# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:— ರಾಷ್ಟ್ರೀಯ ಹೆದ್ದಾರಿ , ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳ ಅಕ್ಕಪಕ್ಕಗಳಲ್ಲಿ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತಡೆಯುವ ಬಗ್ಗೆ (ರಿಬ್ಬನ್ ಡೆವಲಪ್‌ಮೆಂಟ್ ಮತ್ತು ಅತಿಕ್ರಮಣವನ್ನು ತೆರವು ಮಾಡುವ ವಿಚಾರ.

ಓದಲಾಗಿದೆ:—

1) ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ:43:ಸಿಆರ್‌ಎಂ:75 ದಿನಾಂಕ:— 18-2-1976.

2) ಸರ್ಕಾರದ ಸುತ್ತೋಲೆ ಸಂಖ್ಯೆ: ಪಿಡಬ್ಲ್ಯೂಡಿ:46:ಸಿಎನ್‌ಹೆಚ್: 88: ದಿನಾಂಕ:— 09-05-1988.

3) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ) ಬೆಂಗಳೂರು ಅವರ ಪತ್ರ ಸಂಖ್ಯೆ: ಸಿಬಿಎಸ್:ಆರ್‌ಎಂಎಸ್:ಎಇ-1: ಹೈವೇ ಸುತ್ತೋಲೆ :98 ದಿನಾಂಕ:— 2ನೇ ಸೆಪ್ಟೆಂಬರ್ 1998.

— — — — —

## ಪ್ರಸ್ತಾವನೆ:—

ಉಲ್ಲೇಖಿತ ಸರ್ಕಾರಿ ಆದೇಶ (1) ರಲ್ಲಿ ರಸ್ತೆಯ ಮಧ್ಯ ಭಾಗದಿಂದ ಕಟ್ಟಡಗಳ ನಿಯಂತ್ರಣ ರೇಖೆ ಹಾಗೂ ರಸ್ತೆಯ ಅಗಲದ ನಿಯಂತ್ರಣ ರೇಖೆಯನ್ನು ಇಂಡಿಯನ್ ರೋಡ್ ಕಾಂಗ್ರೆಸ್ ಅನ್ವಯ ಇರಬೇಕೆಂದು ಆದೇಶಿಸಿದೆ.

ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ ರಾಜ್ಯ ಹೆದ್ದಾರಿ ಮತ್ತು ಮುಖ್ಯ ಜಿಲ್ಲಾ ರಸ್ತೆಗಳ ಅಕ್ಕಪಕ್ಕಗಳಲ್ಲಿ ರಸ್ತೆ ಭೂಮಿಯಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣವಾಗುತ್ತಿರುವುದು ಮತ್ತು ರಸ್ತೆಗೆ ಸೇರಿದ ಭೂಮಿಯು ಅತಿಕ್ರಮಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರಿಂದ, ಈ ವಿಷಯದಲ್ಲಿ ಒಂದು ಸುತ್ತೋಲೆಯನ್ನು ( ಪಿಡಬ್ಲ್ಯೂಡಿ 46 ಸಿಎನ್‌ಹೆಚ್ 88, ದಿನಾಂಕ 09-05-1988) ಹೊರಡಿಸಿ, ಈ ಕೆಳಗೆ ನಮೂದಿಸಿರುವ ಕೆಲವು ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶಿಸಲಾಗಿತ್ತು.

(1) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಕ್ಕಪಕ್ಕಗಳಲ್ಲಿ ರಸ್ತೆ ಮಧ್ಯ ಭಾಗದಿಂದ ಈ ಕೆಳಗೆ ಸೂಚಿಸಿರುವ ಸ್ಥಳಕ್ಕೆ ಒಳಗಾದ ಕಟ್ಟಡಗಳನ್ನು ನಿರ್ಬಂಧಿಸತಕ್ಕದ್ದು, ಅಲ್ಲದೇ ಈ ಪರಿಮಿತಿಯಲ್ಲಿ ಕಟ್ಟಡ ನಿರ್ಮಾಣ ಮತ್ತು ಅಂಗಡಿಗಳು, ಉಪಹಾರ ಗೃಹಗಳು, ಹೋಟೆಲುಗಳು, ಮುಂತಾದವುಗಳನ್ನು ನಡೆಸುವುದಕ್ಕೆ ಅನುಮತಿಯನ್ನು ಕೊಡತಕ್ಕದ್ದು.

| | | ರಸ್ತೆ ಮಧ್ಯಭಾಗದಿಂದ ದೂರ |
|---|---|---|
| ಅ) ರಾಷ್ಟ್ರೀಯ ಹೆದ್ದಾರಿಗಳು | ... | 40 ಮೀಟರ್ |
| ಆ) ರಾಜ್ಯ ಹೆದ್ದಾರಿಗಳು | ... | 40 ಮೀಟರ್ |
| ಇ) ಮುಖ್ಯ ಜಿಲ್ಲಾ ರಸ್ತೆಗಳು | ... | 25 ಮೀಟರ್ |

(2) ಈಗಾಗಲೇ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಿದ್ದಲ್ಲಿ ಅಂತಹವುಗಳನ್ನು ತೆರವು ಮಾಡಿಸಲು ಸೂಕ್ತ ಕ್ರಮವನ್ನು ಕಾನೂನಿನಂತೆ ತೆಗೆದುಕೊಳ್ಳಬೇಕು.

(3) ರಸ್ತೆಗಳಿಗೆ ಸೇರಿರುವ ಭೂಮಿ ಜಾಗವನ್ನು ಗುರುತಿಸಿ, ಆ ಭಾಗದಲ್ಲಿ ಯಾರಾದರೂ ಅನಧಿಕೃತವಾಗಿ ಅತಿಕ್ರಮಣವಾಗಿದ್ದರೆ, ತೆರವು ಮಾಡಿಸಲು ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಸೂಚನೆಗಳು :-

೨) ಸರಕಾರದ ಸ್ವಾಧೀನದಲ್ಲಿರುವ ಭೂಮಿಯಲ್ಲಿ ಪೆಟ್ರೋಲ್ ಅಥವಾ ಡೀಸೆಲ್ ಪಂಪುಗಳು ಮತ್ತು ಅದಕ್ಕೆ ಸೇರಿದಂತೆ ಅವಶ್ಯಕ ಗೃಹಗಳನ್ನು ಹೆದ್ದಾರಿಯ ಮೇಲೆ ಯಾವುದೇ ಬಾಧಕ ಇಲ್ಲದ ರೀತಿಯಲ್ಲಿ ಕಟ್ಟಲು ಒಪ್ಪಿಗೆಯನ್ನು ಕೊಡಬಾರದು.

೩) ರಸ್ತೆಯ ಮಧ್ಯ ಭಾಗದಿಂದ 40 ಮೀಟರುಗಳ ವರೆಗೆ ಎರಡು ಕಡೆಗೂ ಯಾವ ಕಟ್ಟಡ ನಿರ್ಮಾಣಕ್ಕೆ ಅನುಮತಿ ಕೊಡಕೂಡದು.

೪) ಹೆದ್ದಾರಿ ರಸ್ತೆ ಪಕ್ಕದಲ್ಲಿ ಹೊಸದಾಗಿ ಯಾವ ಬಡಾವಣೆಗಳು ಬರದಂತೆ ಎಲ್ಲಾ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಮತ್ತು ಹೆದ್ದಾರಿ ರಸ್ತೆ ಯಾವ ಒತ್ತುವರಿ ಗೊಳ್ಳದ ಕಟ್ಟಲಾಗದಂತೆ ಈ ಆದೇಶಕ್ಕೆ ಪೂರ್ತಿಯಾಗಿ ಅನುಸರಣೆ ಆಗುವಂತೆ ನೋಡಿಕೊಳ್ಳತಕ್ಕದ್ದು.

5) ಮೇಲ್ಕಂಡ ವಿಷಯಗಳ ಬಗ್ಗೆ ಮುಖ್ಯ ಇಂಜಿನಿಯರುಗಳು, ಅಧೀಕ್ಷಕ ಇಂಜಿನಿಯರುಗಳು ಪ್ರತಿ ತ್ರೈಮಾಸಿಕ ಸಭೆಯಲ್ಲಿ ಈ ವಿಷಯಗಳನ್ನು ಪರಿಶೀಲಿಸಬೇಕು ಮತ್ತು ಕ್ರಮ ತೆಗೆದುಕೊಂಡಬಗ್ಗೆ ಪ್ರತಿ ತಿಂಗಳು ಸರ್ಕಾರಕ್ಕೆ ವರದಿಯನ್ನು ಕಳುಹಿಸಬೇಕು.

ಇದು ಕೇವಲ ಸುತ್ತೋಲೆ ಆಗಿರುವುದರಿಂದ, ನ್ಯಾಯಾಲಯದಲ್ಲಿ ಸಾದರಪಡಿಸಿ, ಇದರಂತೆ ಕ್ರಮ ತೆಗೆದುಕೊಳ್ಳಲಾಗುತ್ತಿಲ್ಲ. ಇದರಿಂದ ಇಂತಹ ಹಲವಾರು ಪ್ರಕರಣಗಳು ನ್ಯಾಯಾಲಯದಲ್ಲಿವೆ. ಈ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತಿಲ್ಲ. ಈ ಕಾರಣದಿಂದಾಗಿ ಸುತ್ತೋಲೆಗೆ ಬದಲಾಗಿ, ಎಲ್ಲಾ ವರ್ಗೀಕರಣ ರಸ್ತೆಗಳಿಗೂ ಅನ್ವಯಿಸುವಂತೆ ಒಂದು ಸರ್ಕಾರದ ಆದೇಶವನ್ನು ಹೊರಡಿಸುವುದು ಅವಶ್ಯಕ ಕಂಡುಬಂದಿದೆ.

ಈ ವಿಷಯಕ್ಕೆ ಸಂಬಂಧಪಟ್ಟಂತೆ, ಐ.ಆರ್.ಸಿ.ಯು ವಿಶೇಷ ಪ್ರಕಟಣೆ 45 – ರಾಜ್ಯ ಹೆದ್ದಾರಿಗಳ ಅಕ್ಕಪಕ್ಕದಲ್ಲಿ ಅನಧಿಕೃತ ಕಟ್ಟಡಗಳ ನಿರ್ಮಾಣ ಮತ್ತು ಅದರ ತಡೆ (prevention of Ribbon Development along Highways) ಇದರ ಉದ್ಧೃತ ಭಾಗ ಕೋಷ್ಟಕ (1) ಮತ್ತು (2) ರಲ್ಲಿ ಎಲ್ಲಾ ವರ್ಗದ ರಸ್ತೆಗಳನ್ನು ಗಣನೆಗೆ ತೆಗೆದುಕೊಂಡು, ಸೂಕ್ತ ಪ್ರಮಾಣದ ಅಂತರಗಳನ್ನು ಸೂಚಿಸಲಾಗಿದೆ.

ಆದ್ದರಿಂದ, ಈ ಐ.ಆರ್.ಸಿ. ಪ್ರಮಾಣವನ್ನು ಮೇಲಿನ ವಿಷಯದಲ್ಲಿ ಸ್ವೀಕರಿಸುವುದು ಸೂಕ್ತವೆಂದು ಕಂಡು ಬಂದಿದೆ.

ಕೋಷ್ಟಕ (1) ಮತ್ತು (2) ಅನ್ನು ಇದರೊಂದಿಗೆ ಲಗತ್ತಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯುಡಿ 362 ಸಿಆರ್‌ಎಂ 98, ಬೆಂಗಳೂರು, ದಿನಾಂಕ 09.10.1998

ಹೆದ್ದಾರಿಯ ಬದಿಯ ಕಟ್ಟಡ

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಸರ್ಕಾರದ ಕೋಷ್ಟಕ (1) ಮತ್ತು (2) ರ ಪ್ರಕಾರ, ಐ.ಆರ್.ಸಿ. ಪ್ರಮಾಣವನ್ನು ಅಂಗೀಕರಿಸಿ, ಸುತ್ತೋಲೆ ಸಂಖ್ಯೆ: ಪಿಡಬ್ಲ್ಯುಡಿ 46 ಸಿಆರ್‌ಎಂ 88, ದಿನಾಂಕ 09-05-1989ರ ಸ್ಥಾನದಲ್ಲಿ, ಷರತ್ತುಗಳನ್ನು ಪಾಲಿಸುವಂತೆ (ಕ್ರಮ ಸಂಖ್ಯೆ 1 ರಿಂದ 5) ಈ ಸರ್ಕಾರದ ಆದೇಶ ಹೊರಡಿಸಿದೆ.